ವ್ಯಾಖ್ಯಾನ

# ಒಂಭತ್ತು ಬಾಗಿಲೊಳು ಒಂದೇ ದೀವಿಗೆ ಹಚ್ಚಿ

1. **Ref.**: Haridasa Taranga Part-2, Published by M/s. Vyaasaanandadasa Pratishtaana, Bengaluru-98, First Edition 2014, page No. 102.
2. **Author:** Pandith Sri Tatte Hanuma Krishnana Dasi (Smt. Shanta Raghottamachar)

**ಶ್ರೀ ಪುರಂದರ ದಾಸರ ಕೀರ್ತನೆಯ ಚಿಂತನೆ:**

**ಒಂಭತ್ತು ಬಾಗಿಲೊಳು ಒಂದೇ ದೀವಿಗೆ ಹಚ್ಚಿ**
**ನಂಬಿಕಿಲ್ಲದ ಸಂಸಾರ ಮಾಡಿದೆನೆ ಸೂವಿಯಾ ಬೀಬಿ ॥ ಪ ॥**

**ತನುವೆಂಬ ಕಲ್ಲಿನೊಳು ಮನವೆಂಬ ಧಾನ್ಯವ ತುಂಬಿ**
**ವನವನದು ನವಬೇಳೆ ಬೀಸಿದೆನೆ**
**ಅಷ್ಟ ಕರ್ತೃಗಳೆಂಬೊ ಅಷ್ಟ ನವಧಾನ್ಯವ ತಂದು**
**ಕುಟ್ಟಿ ಕಟ್ಟಿ ಕಜ್ಜಾಯ ಕರಿದೆನೆ ॥ ೧ ॥**

**ಅಷ್ಟ ಕರ್ತೃಗಳೆಂಬೊ ಕಾಲವನ್ನುಳುಹಿ ನಾನು**
**ನಿಷ್ಠೆಯಿಂದಲಿ ಅನ್ನವ ಬಾಗಿದೆನೆ**
**ಅಷ್ಟರೊಳಗೆನ್ನ ಗಂಡ ಬಂದು ಅಡುವ ಮಡಿಕೆಯ ಒಡೆದು**
**ಮುಟ್ಟಿ ಮುರಿದು ಮೂಲೆಗೆ ಹಾಕಿದನೆ ॥ ೨ ॥**

**ಉಡುವ ಸೀರೆಯ ಸೆಳೆದು ಗಿಡದ ತೊಪ್ಪಲ ಸುತ್ತಿ**
**ತಿರುಗಿ ಬಾರದ್ಹಾಂಗೆ ಮಾಡಿದನೆ**
**ಮಾಡಿದೆ ಒಗೆತನವ ನಂಬಿಕಿಲ್ಲದ ಸಂಸಾರವ ನೆಚ್ಚಿ**
**ಕೂಡಿದೆ ಪುರಂದರ ವಿಠಲನ್ನ ದಾಸರ ॥ ೩ ॥**

ಈ ಹಾಡಿನ ಕರ್ತೃ ಪುರಂದರದಾಸರು ಹರಿದಾಸ ಸಾಹಿತ್ಯದ ಪಿತಾಮಹರು. ಲಜ್ಜೆ ಬಿಟ್ಟು ಗೆಜ್ಜೆ ಕಟ್ಟಿ ಕುಣಿದು ಜನರ ಮನೆ ಮನ ತಟ್ಟಿದ ಮಹಾಚೇತನರು, ವಿದ್ವಾಂಸರು ಪುರಂದರದಾಸರ ಸಾಹಿತ್ಯವನ್ನು ಲೋಕಾಲೋಕ ವಿಚಾರ, ತತ್ತ್ವಜ್ಞಾನ, ಸಾಮಾಜಿಕ ಕುಂದುಕೊರತೆಗಳು, ಸಾಧನಾ ಭಾಗ, ಕ್ಷೇತ್ರದರ್ಶನ, ವೈರಾಗ್ಯ, ಜೀವನಗತಿ ಮುಂತಾಗಿ ವಿಭಾಗಿಸಿದ್ದಾರೆ. ವೈರಾಗ್ಯದ ಹಾಡಿನ ಗುಂಪಿಗೆ ಈ ಹಾಡನ್ನು ನಾವು ಸೇರಿಸಬೇಕಾಗುತ್ತದೆ. ಪುರಂದರದಾಸರು ಆಡಿದ ಮಾತುಗಳೇ ಹಾಡಾದವು. ಸಂಗೀತ ಸಾಹಿತ್ಯ ಎರಡನ್ನು ಭಕ್ತಿರಸದಲ್ಲಿ ಪಕ್ವಗೊಳಿಸಿ ಭಾವಗಂಗೆಯನ್ನು ಹರಿಸಿದ ದಾಸರು ಈ ಹಾಡಿನಲ್ಲಿ ದೇಶದ ನಶ್ವರತ, ಮೋಕ್ಷಸಾಧನೆ ಮಾಡದೇ ಮಾನವ ದಿನಗಳನ್ನು ಕಳೆದು ಸಾವನ್ನಪ್ಪುವ ಸಮಯದಲ್ಲಿ ಪರಿತಪಿಸುವ ಚಿತ್ರವನ್ನು ನಮ್ಮ ಮುಂದಿಡುತ್ತಾರೆ.

ದೇಹವು ಜಡ, ಅಸ್ಥಿರವಾದುದು ಇಂತಹ ದೇಹವನ್ನು ಭಗವಂತ ನಮಗೆ ಕೊಟ್ಟಿದ್ದು ಸಾಧನೆ ಮಾಡಿಕೊಳ್ಳಲು. ಜ್ಞಾನಾರ್ಜನೆಯಿಂದ ಅಂತರಂಗದಲ್ಲಿ ಹರಿಯನ್ನು ಕಾಣುವ ಪ್ರಯತ್ನವನ್ನು ಮಾಡಲು ಮಾನವಜನ್ಮ ಬಂದಿರುತ್ತದೆ. ಆದರೆ ಬಾಲ್ಯ, ಯೌವ್ವನಗಳಲ್ಲಿ ಮನಸ್ಸು ಹಾರುವ ಕುದುರೆಯಾಗಿ ವರ್ತಿಸುವುದರಿಂದ ಮನಸ್ಸು ಭಗವಂತನತ್ತ ಹೋಗುವದು ಬಹು ಕಷ್ಟ ಜೀವಾನುಭವದಿಂದ ಮನಸ್ಸು ಪಕ್ವಗೊಂಡು ಬಿಂಬದಲ್ಲಿ ಬಿಂಬನನ್ನು ಕಾಣುವಾ ಎಂದು ಬಯಸಿದರೆ ದೇಹಾರೋಗ್ಯ ಹದಗೆಟ್ಟು ಸಾಧನೆಗೆ ಬಿಡುವುದಿಲ್ಲ. ಈ ಮಾನವನ ಸ್ಥಿತಿಯನ್ನು ಪುರಂದರದಾಸರು ತಮ್ಮ ಅನೇಕ ಕೀರ್ತನೆಗಳಲ್ಲಿ ಹೇಳಿದ್ದಾರೆ.

ಆಸೆಗಳೇ ಹೊಸ ಬೇಳೆಗಳು ಮನಸ್ಸೆಂಬ ಯಂತ್ರಕ್ಕೆ ಹಾಕಿ ಅನುಭವಿಸುವ ನಿರಂತರ ಪ್ರಯತ್ನ ಮನುಷ್ಯರದು. ಹೊಸ ಹೊಸ ಆಸೆಗಳು, ಎಲ್ಲ ಆಸೆಗಳೂ ಈಡೇರಬೇಕೆಂಬ ಹೋರಾಟ, ಆ ಹೋರಾಟದ ಅನುಭವವನ್ನು ಪುರಂದರದಾಸರು ಕಜ್ಜಾಯವನ್ನು ಕರೆಯಬೇಕಾದಾಗ ಕುಟ್ಟಿ – ತಟ್ಟಿ ಪಾಕ ತೆಗೆದು ಕರೆದು ತಯಾರಿಸುವುದರಲ್ಲಿರುವ ಶ್ರಮಕ್ಕೆ ಹೋಲಿಸಿದ್ದಾರೆ.

ಅಷ್ಟಗಳಾದ ಅನ್ನ, ಅರ್ಥ, ಪ್ರಭುತ್ವ, ಯೌವ್ವನ, ವೈಭವ, ಗೃಹ ವಸ್ತ್ರ, ಆಭರಣಗಳ ಭೋಗದಲ್ಲಿ ಮತ್ತು ಅಷ್ಟ ಭೋಗಗಳಾದ ಪಾನ, ಭೋಜನ, ವಸನ, ಗಂಧ, ಪುಷ್ಪ, ತಾಂಬೂಲ, ಸ್ತ್ರೀ ಮನೆಗಳ ಹಿಂದೆ ಬಿದ್ದು ಕಾಲದ ಪರಿಜ್ಞಾನವೇ ಇಲ್ಲದೇ ಏನೂ ಸಾಧನೆ ಮಾಡದೇ ಕಾಲವನ್ನು ಕಳೆದೆ. ಅನ್ನವನು ಬಾಗಿದೆ ಎಂದರೆ ನನ್ನ ಆಯುಷ್ಯವನ್ನು ಕಳೆದೆ, ಅಜ್ಞಾನ, ಭೋಗ ಭಾಗ್ಯಗಳಲ್ಲಿ ಮೈಮರೆದು ಮೆರೆಯುತ್ತಿರುವಾಗಲೇ ಅರಿವಿಲ್ಲದಂತೆ ಸಾವಿನತ್ತ ಸಾಗಿ ಆಗಿತ್ತು. ಜ್ಞಾನ ಸಂಪಾದನೆ ಮೋಕ್ಷ ಸಾಧನೆಯತ್ತ ಗಮನಕೊಡಬೇಕು ಎನ್ನುವಷರಲ್ಲಿ ಕಾಲನ ದೂತರು ಅದನ್ನೇ ದಾಸರು 'ಗಂಡ' ಎಂದು ಕರೆಯುತ್ತಾರೆ. ಈ ಹಾಡಿನಲ್ಲಿ ಶಬ್ದಾರ್ಥಕ್ಕಿಂತ ಶಬ್ದಗಳ ಹಿಂದಿರುವ ಭಾವಾರ್ಥಕ್ಕೆ ದಾಸರು ಪ್ರಾಮುಖ್ಯತೆಯನ್ನು ನೀಡಿದ್ದಾರೆ.

ಮೂರನೇ ನುಡಿಯಲ್ಲಿ ಅಪರ ಕರ್ಮಕ್ಕೆ ಸಂಬಂಧ ಪಟ್ಟ ಹಾಗೆ ಮೈಮೇಲಿನ ಬಟ್ಟೆ ತೆಗೆದು ಹುಟ್ಟುಡುಗೆಯಲಿ ಅಥವಾ ಗಿಡದ ತೊಪಲ ಹೊದಿಕೆಯಲಿ ಪಂಚಭೂತದ ದೇಹವನ್ನು ದಹನ ಮಾಡಿದ ವಿಷಯ ತಿಳಿಸುತ್ತಾರೆ. ಆ ದೇಹಕ್ಕೆ ಮತ್ತೆ ಮರಳಲು ಸಾಧನೆಗೈಯಲು ಸಾಧ್ಯವಿಲ್ಲವೆಂದು ಜೀವ ಪರಿತಪಿಸುವ ಬಗೆಯನ್ನು ತಿಳಿಸಿದ್ದಾರೆ. ಈ ದೃಷ್ಟಿಯಿಂದಲೇ 'ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ' ಎಂದು ದಾಸರು ಹೇಳಿದ್ದು.

'ಒಂಭತ್ತು ಬಾಗಿಲೊಳು ಒಂದೇ ದೀವಿಗೆ ಹಚ್ಚಿ' ಮಾನವನ ದೇಹಕ್ಕೆ ಒಂಭತ್ತು ಬಾಗಿಲುಗಳು, ನವದ್ವಾರಗಳಾದ ಕಣ್ಣು, ಮೂಗು, ಬಾಯಿ, ಕಿವಿ, ಗುದದ್ವಾರ, ಮೂತ್ರದ್ವಾರ, ಇಂತಹ ದೇಹದಲ್ಲಿ ಜೀವ ಕುಳಿತಿದ್ದಾನೆ. ಅದನ್ನೇ ದಾಸರು ಒಂದೇ ದೀವಿಗೆ ಹಚ್ಚಿ ಎಂದು ಹೇಳಿದರು. ಭಾಗವತದಲ್ಲಿ "ಪುರಂಜನೋಪಾಖ್ಯಾನ"ದಲ್ಲಿ ಬಹು ಸುಂದರವಾಗಿ ದೇಹ, ಮನಸ್ಸು, ಮುಪ್ಪು, ಸಾವು, ಎಲ್ಲದರ ಬಗ್ಗೆ ವಿವರವಾಗಿ ಕಥೆ ಬರುತ್ತದೆ.

ಜೀವ ಹಾರಿ ಹೋಗಲು ಒಂದಲ್ಲ ಒಂಭತ್ತು ಬಾಗಿಲುಗಳು ತೆರೆದಿವೆ ಈಗಲೋ ಇನ್ಯಾವಗಲೋ ಪ್ರಾಣ ಯಾವ ಕ್ಷಣದಲ್ಲಿ ಹಾರಿಹೋಗುತ್ತದೆಂದು ಹೇಳಲಾಗದು.

ಅನಿಶ್ಚಿತವಾದ ದೇಹದಲ್ಲಿದ್ದು ಅದೇ ಶಾಶ್ವತ ಎಂಬ ಭ್ರಮೆಯಿಂದ ಬೀಗಬಾರದೆಂಬ ಎಚ್ಚರಿಕೆಯನ್ನು ದಾಸರು ಇಲ್ಲಿ ಕೊಟ್ಟಿದ್ದಾರೆ. ಪುರಾಣ ಇತಿಹಾಸದಲ್ಲಿಯೂ ಸಹ ಒಬ್ಬ ಪರೀಕ್ಷಿತ ಮಹಾರಾಜ ಇನ್ನೊಬ್ಬ ಖಟ್ವಾಂಗ ಮಹಾರಾಜ ತಮ್ಮ ಸಾವಿನ ಬಗ್ಗೆ ತಿಳಿದು ಯೋಗ ಮತ್ತು ಹರಿ–ವಾಯುಗಳ ಅನುಗ್ರಹದಿಂದ ಸಾಧನೆ ಮಾಡಿಕೊಂಡು ಉದ್ಧಾರ ಕಂಡರು. ಉಳಿದಂತೆ ಎಲ್ಲಾ ಸಾಧಕರೂ ಅನಿರೀಕ್ಷಿತವಾಗಿ ಬರುವ ಸಾವಿಗೆ ಅಂಜಿ ಜ್ಞಾನ ಭಕ್ತಿಯನ್ನು ಸಂಪಾದಿಸುವಲ್ಲಿ ಪ್ರವೃತ್ತಿಯನ್ನು ತೋರಿಸುತ್ತಾರೆಂಬುದನ್ನು ನಾವು ನೋಡುತ್ತೇವೆ.

ಆದ್ದರಿಂದಲೇ ದಾಸರು ಜಡವಾದ ದೇಹವನ್ನು ಬೀಸುವ ಕಲ್ಲಿಗೆ ಮತ್ತು ಬರುವ ಸುಖ ದುಃಖಗಳನ್ನು ನವವಿಧ ಬೇಳೆಗೆ ಹೋಲಿಸಿ ಹೇಳಿದ್ದಾರೆ. ಆದರೆ ನವವಿಧ ಭಕ್ತಿಯನ್ನು ಮಾಡಿ ಪುರಂದರವಿಠಲನನ್ನು ಕೂಡಬೇಕೆಂಬುದು ಅವರ ಸಂದೇಶ.

## ಶ್ರೀ ಕೃಷ್ಣಾರ್ಪಣಮಸ್ತು

**ಲೇಖಕರು:** ಪಂಡಿತ್ ಶ್ರೀ ತಟ್ಟೆ ಹನುಮ ಕೃಷ್ಣನ ದಾಸಿ (ಶ್ರೀಮತಿ ಶಾಂತಾ ರಘೋತ್ತಮಾಚಾರ್)